<u>**ಕರ್ನಾಟಕ ವಿಧಾನ ಪರಿಷತ್ತು**</u>

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ ಇವರು ದಿನಾಂಕ:08.03.2026ರ ಪ್ರಜಾ ವಾಣಿ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನು ಉಲ್ಲೇಖಿಸಿ ಶೂನ್ಯ ವೇಳೆಯಲ್ಲಿ** "ಹಿರೇಬಗನಾಳ ಗ್ರಾಮದಲ್ಲಿ ಆರೋಗ್ಯ ಇಲಾಖೆಯ ಸರ್ವೆ, ಮಾಲಿನ್ಯದಿಂದ ಅನಾರೋಗ್ಯ ಕಾರ್ಖಾನೆಗಳು ಕೇಂದ್ರೀಕೃತವಾಗಿರುವ ತಾಲ್ಲೂಕಿನ ಹಿರೇಬಗನಾಳ ಗ್ರಾಮದ ಸುತ್ತಲಿನ ಪರಿಸರ ಮಾಲಿನ್ಯವಾಗಿದ್ದು, ಗ್ರಾಮದ ಜನರಲ್ಲಿ ಗಂಭೀರ ಕಾಯಿಲೆಗಳು ಪತ್ತೆಯಾಗಿವೆ.

ಕಾರ್ಖಾನೆಗಳು ಹೊರಸೂಸುವ ಕಪ್ಪುಕಣಗಳ ದೂಳಿನಿಂದ ಮಾಲಿನ್ಯ ಆಗುತ್ತಿದೆ. ನಿತ್ಯ ಯಾತನೆ ಅನುಭವಿಸುವಂತಾಗಿದೆ ಎಂದು ಗ್ರಾಮಸ್ಥರು, ದೂರುತ್ತಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹಿರೇಬಗನಾಳ ಗ್ರಾಮದಲ್ಲಿ ಇದೇ ವರ್ಷದ ಫೆಬ್ರುವರಿಯಲ್ಲಿ ಜನರ ಆರೋಗ್ಯ ತಪಾಸಣೆ ನಡೆಸಿದೆ. ಗ್ರಾಮದಲ್ಲಿ 208 ಮಕ್ಕಳು ಸೇರಿ 2,333 ಜನಸಂಖ್ಯೆಯಿದೆ. ಈ ಪೈಕಿ ಹಿರೇಬಗನಾಳದಲ್ಲಿ ನಡೆದ ಸಭೆಯಲ್ಲಿ ಅನಾರೋಗ್ಯಪೀಡಿತ ಮಗುವಿನೊಂದಿಗೆ ತಾಯಿ ಕಣ್ಣೀರು ಹಾಕಿದ್ದಾರೆ.

ಉಸಿರಾಟ ಸಂಬಂಧಿ ಕಾಯಿ ಕಾಯಿಲೆಯಿಂದ 124, ಕೊಡ ಚರ್ಮಕಾಯಿಲೆಯಿಂದ 49, ಒಬ್ಬರು ಗರ್ಭಕಂಠ ಹಾಗೂ ಬಾಯಿ ಕ್ಯಾನ್ಸರ್, 25 ಜನರಲ್ಲಿ ಟಿಬಿ, 58 ಜನರಲ್ಲಿ ಬಿಪಿ, 40 ಜನರಲ್ಲಿ ಮಧುಮೇಹ, 42 ವ್ಯಕ್ತಿಗಳಲ್ಲಿ ದೃಷ್ಟಿದೋಷ ಹಾಗೂ ಮೂವರಿಗೆ ಪಾರ್ಶ್ವವಾಯು (ಸ್ಟ್ರೋಕ್) ಆಗಿದೆ ಎನ್ನುವುದು ಗೊತ್ತಾಗಿದೆ.

ಬಗನಾಳ, ಅಲ್ಲಾನಗರ, ಹಾಲವರ್ತಿ, ಕುಣಿಕೇರಿ, ಗಿಣಿಗೇರಿ, ಮುದ್ದಾಬಳ್ಳಿ, ಕಾಸನಕಂಡಿ, ಬೇವಿನಹಳ್ಳಿ, ಬಸಾಪುರ, ಕನಕಾಪುರ, ಲಾಚನಕೇರಿ ಗ್ರಾಮಸ್ಥರಿಂದ ಅನಾರೋಗ್ಯದ ಬಗ್ಗೆ ನಿರಂತರವಾಗಿ ದೂರುಗಳು ಬಂದಿದ್ದರಿಂದ ಆರೋಗ್ಯ ಇಲಾಖೆ ಗ್ರಾಮದಲ್ಲಿ ತಪಾಸಣೆ ಮಾಡಿದ್ದು, ನೆರೆಯ ಹಾಲವರ್ತಿ, ಅಲ್ಲಾನಗರ ಸೇರಿದಂತೆ ವಿವಿಧೆಡೆಯೂ ತಪಾಸಣೆಗೆ ಮುಂದಾಗಿದೆ.

ಕಾರ್ಖಾನೆಗಳ ಮಾಲಿನ್ಯ ನಿಯಂತ್ರಿಸಬೇಕು ಹಾಗೂ ಕಾರ್ಖಾನೆಗಳ ವಿಸ್ತರಣೆಗೆ ಅವಕಾಶ ಕೊಡಬಾರದು ಎಂದು ಆಗ್ರಹಿಸಿ ಜಿಲ್ಲಾ ಬಚಾವ್ತೊ ಆಂದೋಲನ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ 128 ದಿನಗಳಿಂದ ಜಿಲ್ಲಾ ಕೇಂದ್ರದಲ್ಲಿ ಧರಣಿ ನಡೆಸುತ್ತಿದೆ.

ಮಾಲಿನ್ಯದಿಂದ ಕಾರ್ಖಾನೆಗಳ ಸುತ್ತಲೂ ಇರುವ ಗ್ರಾಮಗಳ ಜನರ ಬದುಕು ಅಸಹನೀಯವಾಗಿದೆ. ಆದ್ದರಿಂದ ಮಾಲಿನ್ಯದಿಂದ ಬಾಧಿತ ಗ್ರಾಮಗಳ ಜನರನ್ನು ಭಾರತೀಯ ವೈದ್ಯಕೀಯ ಸಂಸ್ಥೆಯಿಂದಲೇ ಸಂಪೂರ್ಣ ಆರೋಗ್ಯ ತಪಾಸಣೆ ನಡೆಸಬೇಕು. ಆಗ ಇನ್ನಷ್ಟು ಸಮಸ್ಯೆಗಳು ಗೊತ್ತಾಗುತ್ತವೆ. ಈ ಬಗ್ಗೆ ಆರೋಗ್ಯ ಇಲಾಖೆ ತಕ್ಷಣ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು" ಪ್ರಸ್ತಾಪಿಸಿರುತ್ತಾರೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:-**

ಪ್ರಾಥಮಿಕ ಆರೋಗ್ಯ ಕೇಂದ್ರ, ಗಿಣಿಗೇರಾ, ಕೊಪ್ಪಳ ತಾಲೂಕು ಮತ್ತು ಜಿಲ್ಲೆ, ಇವರು ದಿನಾಂಕ:24.02.2026 ರಂದು ಹೀರೆಬಗನಾಳ ಗ್ರಾಮದ ಆರೋಗ್ಯ ಸಮೀಕ್ಷೆಯ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯನ್ನು **ಅನುಬಂಧ-01**ರಲ್ಲಿ ನೀಡಲಾಗಿದೆ. ಸದರಿ ವರದಿಯ ಮೇರೆಗೆ ಮಾನ್ಯ ಜಿಲ್ಲಾಧಿಕಾರಿಗಳ ಸೂಚನೆಯಂತೆ ಹೀರಬಗನಾಳ ಗ್ರಾಮಸ್ಥರಲ್ಲಿ ಆರೋಗ್ಯ ಇಲಾಖೆಯಿಂದ ಪ್ರತಿವಾರ ಗ್ರಾಮದವರ ಆರೋಗ್ಯ ತಪಾಸಣೆ ನಡೆಸಲು ತಿಳಿಸಿದ್ದು ಅದರಂತೆ ಕ್ರಮವಹಿಸಲಾಗುತ್ತಿದೆ. ಹೀರೆಬಗನಾಳ ಗ್ರಾಮದಲ್ಲಿ ನಡೆದ ಮನೆ ಮನೆ ಸಮಿಕ್ಷೆ ವರದಿಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ ರವರಿಗೆ ದಿನಾಂಕ:04.03.2026 ರಂದು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿರುತ್ತದೆ. ವಿವರ **ಅನುಬಂಧ-02**ರಲ್ಲಿ ನೀಡಲಾಗಿದೆ.

ದಿನಾಂಕ:05.03.2026 ರಂದು ಮಾನ್ಯ ಶಾಸಕರು, ಕೊಪ್ಪಳ ವಿಧಾನ ಸಭಾ ಕ್ಷೇತ್ರ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ ರವರು ಮತ್ತು ಇತರೆ ಗಣ್ಯವ್ಯಕ್ತಿಗಳು/ಅಧಿಕಾರಿಗಳು ಹೀರೆಬಗನಾಳ ಗ್ರಾಮದಲ್ಲಿ ಭೇಟಿ ನೀಡಿದಾಗ ಕೆಲವು ಸಾರ್ವಜನಿಕರಿಗೆ ಆರೋಗ್ಯ ಸಮಸ್ಯೆಯು ಇರುವುದು ಕಂಡುಬಂದಿದ್ದರಿಂದ ಪ್ರಾಥಮಿಕವಾಗಿ ಕಾರ್ಖಾನೆ ಸುತ್ತಲು ಇರುವ ಉಳಿದ ಹಳ್ಳಿಗಳಾದ ಅಲ್ಲಾನಗರ, ಹಾಲವರ್ತಿ, ಕುಣಿಕೇರಿ, ಕುಣಿಕೇರಿ-ತಾಂಡ, ಕಾಸನಕಂಡಿ, ಕನಕಾಪುರ, ಲಾಚನಕೇರಿ ಗ್ರಾಮಗಳ ಸರ್ವೇ ಕಾರ್ಯ ನಡೆಸಲು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದ್ದು, ಅದರಂತೆ ಈಗಾಗಲೇ ಕುಣಿಕೇರಿ ಗ್ರಾಮದಲ್ಲಿ ಆರೋಗ್ಯ ಸಮಿಕ್ಷೇ ನಡೆಸಲಾಗುತ್ತಿದೆ.

ಆರೋಗ್ಯ ಸಮಸ್ಯೆ ಕಂಡು ಬಂದವರಿಗೆ ಇಲಾಖೆಯಿಂದ ಅಗತ್ಯವಾದ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ. ಹಾಗೂ ಸಾರ್ವಜನಿಕರಿಗೆ ನಿರಂತರ ಜಾಗೃತಿ ಚಟುವಟಿಕೆಗಳನ್ನು ಹಮ್ಮಿಕೊಂಡು ಅರಿವು ಮೂಡಿಸಲಾಗುತ್ತಿದೆ ಸಂಬಂಧಪಟ್ಟ ಗ್ರಾಮಗಳಲ್ಲಿ ಇರುವ ಆರೋಗ್ಯ ಸಿಬ್ಬಂದಿಗಳು ಸಾರ್ವಜನಿಕರ ಆರೋಗ್ಯ ಮೇಲೆ ನಿಗವಹಿಸಿರುತ್ತಾರೆ.

**ಆಕುಕ 75 ಎಸ್‌ಎಂಎಂ 2026**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್ ಕೊಪ್ಪಳ

ಆಡಳಿತ ವೈದ್ಯಾಧಿಕಾರಿಗಳ ಕಾರ್ಯಾಲಯ

# ಪ್ರಾಥಮಿಕ ಆರೋಗ್ಯ ಕೇಂದ್ರ ಗಿಣಗೇರಾ ತಾ॥&ಜಿ॥ ಕೊಪ್ಪಳ

ಸಂಖ್ಯೆ:ಪ್ರಾ.ಆ.ಕೇ/ಗಿ/2025-26 Dated 24/02/2026

ಗೆ,

ಮಾನ್ಯ ಜಿಲ್ಲಾ ಆರೋಗ್ಯ ಮತ್ತು

ಕುಟುಂಬ ಕಲ್ಯಾಣ ಅಧಿಕಾರಿಗಳು ಕೊಪ್ಪಳ

ಮಾನ್ಯರೇ,

ವಿಷಯ: ಹಿರೇಬಗನಾಳ ಗ್ರಾಮದಲ್ಲಿ ಮನೆ ಮನೆ ಸಮೀಕ್ಷೆಯ ವರದಿ ಸಲ್ಲಿಸುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಥಮಿಕ ಆರೋಗ್ಯ ಕೇಂದ್ರ ಗಿಣಗೇರಾ ವ್ಯಾಪ್ತಿಯಲ್ಲಿ ಬರುವ ಹಿರೇಬಗನಾಳ ಗ್ರಾಮದಲ್ಲಿ ದಿನಾಂಕ:11/02/2026 ಮತ್ತು 12/02/2026 ರಂದು ಎರಡು ದಿನಗಳ ಕಾಲ ಮನೆ ಮನೆಗೆ ಆರೋಗ್ಯ ಸಮೀಕ್ಷೆಯನ್ನು P&S M PG STUDENT ಮತ್ತು MBBS INTERNS,SHIO,PHCO,CHO,ಆಶಾ ಕಾರ್ಯಕರ್ತೆಯರು ಹಾಗೂ THO OFFICE ಕೊಪ್ಪಳ ಅವರ ಸಹಯೋಗದಿಂದ, ಕ್ಷೇತ್ರ ಸಿಬ್ಬಂದಿಗಳ ಸಹ ಸಹಕಾರದಲ್ಲಿ ಹಾಗೂ ತಾಲೂಕ ಆರೋಗ್ಯ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಮನೆ ಮನೆ ಸಮೀಕ್ಷೆ ನಡೆಸಲಾಗಿದೆ.

ವಂದನೆಗಳೊಂದಿಗೆ,

ವೈದ್ಯಾಧಿಕಾರಿಗಳು

ಪ್ರಾಥಮಿಕ ಆರೋಗ್ಯ ಕೇಂದ್ರ

ಗಿಣಗೇರಾ ತಾ॥ ಜಿ॥ ಕೊಪ್ಪಳ

ಪ್ರತಿಯನ್ನು:

1. ಮಾನ್ಯ ಜಿಲ್ಲಾ ಸರ್ವೇಕ್ಷಣಾ ಹಾಗೂ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳು ಕೊಪ್ಪಳ ರವರ ದಯಾಪರ ಮಾಹಿತಿಗಾಗಿ
2. ಮಾನ್ಯ ತಾಲೂಕಾ ಆರೋಗ್ಯಾಧಿಕಾರಿಗಳು ಕೊಪ್ಪಳ ರವರ ದಯಾಪರ ಮಾಹಿತಿಗಾಗಿ
3. ಕಛೇರಿ ಪ್ರತಿ.

ವೈದ್ಯಾಧಿಕಾರಿಗಳು

ಪ್ರಾಥಮಿಕ ಆರೋಗ್ಯ ಕೇಂದ್ರ

ಗಿಣಗೇರಾ ತಾ॥ ಜಿ॥ ಕೊಪ್ಪಳ



File No. HFW/75/SMM/2026-HEALTH 1-HEALTH AND FAMILY WELFARE SEC (Computer No. 2108169)

Generated from eOffice by SATISH BAGAPPA HANGARAGI, HFW-ASST2(SBH), HEALTH1 ASSISTANT, HEALTH AND FAMILY WELFARE SEC on 09/04/

## PHC GUNGERA

### HOUSE TO HOUSE SURVEY REPORT OF HIREBAGANAL VILLAGE

| POPULATION | | | 0-5 YEARS | | | SAM | | | URTI | | | SKIN LESIONS | | | CATARACT | | |
|---|---|---|---|---|---|---|---|---|---|---|---|---|---|---|---|---|---|
| M | F | T | M | F | T | M | F | T | M | F | T | M | F | T | M | F | T |
| 1179 | 1159 | 2338 | 101 | 107 | 208 | 0 | 0 | 0 | 38 | 84 | 122 | 26 | 23 | 49 | 8 | 10 | 18 |

| BP | | | DM | | | BOTH( BP & DM) | | | REFRACTIVE ERROR | | | KNEE PAIN | | |
|---|---|---|---|---|---|---|---|---|---|---|---|---|---|---|
| M | F | T | M | F | T | M | F | T | M | F | T | M | F | T |
| 34 | 34 | 68 | 21 | 23 | 44 | 20 | 16 | 36 | 26 | 22 | 48 | 35 | 43 | 78 |

| CANCER | | | STROKE | | | TB CASE | | | | | | OLD TB CASES | | |
|---|---|---|---|---|---|---|---|---|---|---|---|---|---|---|
| | | | | | | 2025 | | | 2026 | | | | | |
| M | F | T | M | F | T | M | F | T | M | F | T | M | F | T |
| 1 | 1 | 2 | 3 | 0 | 3 | 2 | 2 | 4 | 1 | 1 | 2 | 12 | 11 | 23 |

| PRIMARY INFERTILITY (Married life >5 years) | INFANT DEATH (2025-26) | MATERNAL DEATH |
|---|---|---|
| 11 | 2 | 0 |

ವೈದ್ಯಾಧಿಕಾರಿಗಳು
ಪ್ರಾಥಮಿಕ ಆರೋಗ್ಯ ಕೇಂದ್ರ

CANLER



File No. HFW/75/SMM/2026-HEALTH 1-HEALTH AND FAMILY WELFARE SEC (Computer No. 2108169)

# PHC GINIGERA

## HIREBAGANAL VILLAGE

CANCER → 2 → 1 Oral Cancer
→ 1 Ca Gi

2) CVA → 3 Male → 1 paediatric

3) NLEP → MB → 0 ] last 5 yrs
PB → 0

4) NVBDCP → Malaria → Nil
→ Dengue → 2 [2024]
→ 0 [2025]
→ 0 [2026]
→ Chikungunya → 0 (3 yrs)
→ Filariasis → 0 (3 yrs)

5) Severe Anaemia < 7 gm% → Nil (last 3 yrs According to Reli portal)

Venkatesh

ವೈದ್ಯಾಧಿಕಾರಿಗಳು
ಪ್ರಾಥಮಿಕ ಆರೋಗ್ಯ ಕೇಂದ್ರ
ಗಿಣಿಗೇರಾ ತಾ|ಜಿ|| ಕೊಪ್ಪಳ



File No. HFW/75/SMM/2026-HEALTH 1-HEALTH AND FAMILY WELFARE SEC (Computer No. 2108169)
Generated from eOffice by SATISH BAGAPPA HANGARAGI, HFW-ASST2(SBH), HEALTH1 ASSISTANT, HEALTH AND FAMILY WELFARE SEC on 09/04/2

MANAS

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕೊಪ್ಪಳ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

ವಾಣಿ ಸಂಖ್ಯೆ : 08539-221660 ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ

Mail : dhokoppal@gmail.com ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ-583231.

ಸಂಖ್ಯೆ: ಜಿ.ಆ.ಕು.ಕ.ಅ.ಕೊ/ಐ.ಇ.ಓ/146/2025-26 ದಿನಾಂಕ: 10.03.2026

ಇವರಿಗೆ,

ಮಾನ್ಯ ಸಹ-ನಿರ್ದೇಶಕರು(ಐ.ಇ.ಓ),

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ

ನಿರ್ದೇಶನಾಲಯ, ಬೆಂಗಳೂರು.

ಮಾನ್ಯರೇ,

**ವಿಷಯ:** ದಿನಾಂಕ: 08.03.2026 ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ "ಗ್ರಾಮಸ್ಥರ ಭಾದಿಸುವ ಗಂಭೀರ ಕಾಯಿಲೆ" ಎಂಬ ಸುದ್ದಿ ಪ್ರಕಟಣೆಗೊಂಡ ಬಗ್ಗೆ ಸ್ಪಷ್ಟೀಕರಣ ವರದಿ ಸಲ್ಲಿಸುತ್ತಿರುವ ಕುರಿತು.

**ಉಲ್ಲೇಖ:** ತಮ್ಮ ನಿರ್ದೇಶನಾಲಯದ ಇ-ಮೇಲ್ ಸಂದೇಶದ ದಿನಾಂಕ: 09.03.2026.

*** *** ***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೊಪ್ಪಳ ಜಿಲ್ಲೆಯ ಪ್ರಜಾವಾಣಿ ದಿನಪತ್ರಿಕೆಯಲ್ಲಿ ದಿನಾಂಕ:08.03.2026 ರಂದು "ಗ್ರಾಮಸ್ಥರ ಭಾದಿಸುವ ಗಂಭೀರ ಕಾಯಿಲೆ" ಎಂಬ ಶಿರ್ಷಿಕೆ ಅಡಿಯಲ್ಲಿ ನಕರಾತ್ಮಕ ಸುದ್ದಿ ಪ್ರಕಟಗೊಂಡ ಬಗ್ಗೆ ಸ್ಪಷ್ಟೀಕರಣ ವರದಿಯನ್ನು ಅತೀ ಜರೂರಾಗಿ ಸಲ್ಲಿಸುವಂತೆ ಉಲ್ಲೇಖದನ್ವಯ ಸೂಚಿಸಿರುತ್ತೀರಿ.

ಮುಂದುವರೆದು, ಸದರಿ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ವರದಿಯು ಕೊಪ್ಪಳ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ಗಿಣಿಗೇರಾ ವ್ಯಾಪ್ತಿಗೆ ಬರುತ್ತದೆ. ಹಿರೇಬಗನಾಳ ಗ್ರಾಮವು ಕಾರ್ಖಾನೆಗಳ ಸಮೀಪದ ಗ್ರಾಮವಾಗಿದ್ದು, ಸದರಿ ಗ್ರಾಮಕ್ಕೆ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಗಳು ಖುದ್ದಾಗಿ ಭೇಟಿ ನೀಡಿ, ಹೀಗಾಗಲೇ ಆ ಗ್ರಾಮದಲ್ಲಿ ಸಂಪೂರ್ಣವಾಗಿ ಆರೋಗ್ಯ ಸಮೀಕ್ಷೆ ನಡೆಸಲಾಗಿದ್ದು, ಖಾಯಿಲೆವುಳ್ಳವರಿಗೆ ಚಿಕಿತ್ಸೆ ನೀಡಲಾಗಿದೆ ಹಾಗೂ ಮುಂಜಾಗ್ರತ ಕ್ರಮಕ್ಕಾಗಿ ಆರೋಗ್ಯಶಿಕ್ಷಣ ಚಟುವಟಿಕೆಗಳನ್ನು ಹಮ್ಮಿಕೊಂಡು ಅರಿವು ಮೂಡಿಸಲಾಗುತ್ತಿದೆ. ಪ್ರತಿವಾರ ಸದರಿ ಗ್ರಾಮದಲ್ಲಿ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡು ನಿರಂತರ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ. ಈ ವಿಷಯವನ್ನು ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು, ಕೊಪ್ಪಳ.

ಪ್ರತಿಯನ್ನು:

1. ಮಾನ್ಯ ವಿಭಾಗೀಯ ಜಂಟಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಕಲಬುರಗಿ ಇವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಹಾಗೂ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ಕೊಪ್ಪಳ ಇವರ ಮಾಹಿತಿಗಾಗಿ.
3. ತಾಲೂಕಾ ಆರೋಗ್ಯಾಧಿಕಾರಿಗಳು, ಕೊಪ್ಪಳ ಇವರ ಮಾಹಿತಿಗಾಗಿ.
4. ಕಛೇರಿ ಪ್ರತಿ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು, ಕೊಪ್ಪಳ.

"ಬಾಲ್ಯ ವಿವಾಹವನ್ನು ನಿಷೇಧಿಸಲಾಗಿದೆ, ಬಾಲ್ಯ ವಿವಾಹ ಶಿಕ್ಷಾರ್ಹ ಅಪರಾಧ"



File No. HFW/75/SMM/2026-HEALTH 1-HEALTH AND FAMILY WELFARE SEC (Computer No. 2108169)

# ಗ್ರಾಮಸ್ಥರ ಬಾಧಿಸುವ ಗಂಭೀರ ಕಾಯಿಲೆ

## ಕೊಪ್ಪಳ: ಹಿರೇಬಗನಾಳ ಗ್ರಾಮದಲ್ಲಿ ಆರೋಗ್ಯ ಇಲಾಖೆಯ ಸರ್ವೆ • ಮಾಲಿನ್ಯದಿಂದ ಅನಾರೋಗ್ಯ

• ಪ್ರಮೋದ ಕುಲಕರ್ಣಿ

ಕೊಪ್ಪಳ: ಕಾರ್ಖಾನೆಗಳು ಕೇಂದ್ರೀಕೃತವಾಗಿರುವ ತಾಲ್ಲೂಕಿನ ಹಿರೇಬಗನಾಳ ಗ್ರಾಮದ ಸುತ್ತಲಿನ ಪರಿಸರ ಮಾಲಿನ್ಯವಾಗಿದ್ದು, ಗ್ರಾಮದ ಜನರಲ್ಲಿ ಗಂಭೀರ ಕಾಯಿಲೆಗಳು ಪತ್ತೆಯಾಗಿವೆ.

ಕಾರ್ಖಾನೆಗಳು ಹೊರಸೂಸುವ ಕಲ್ಮಶದಿಂದ ಮೊದಲಿನಿಂದ ಮಾಲಿನ್ಯ ಆಗುತ್ತಿದೆ. ನಿತ್ಯ ನರಕ ಅನುಭವಿಸುವಂತಾಗಿದೆ ಎಂದು ಗ್ರಾಮಸ್ಥರು ದೂರುತ್ತಾರೆ.

ಪತ್ರಿಕೆಗೆ ಗ್ರಾಮಕ್ಕೆ ಭೇಟಿ ನೀಡಿದ್ದ ವೇಳೆ ರಾಜ್ಯಪಾಲರನ್ನು ಭೇಟಿ ಅವರನ್ನು ಗ್ರಾಮಸ್ಥರು ತಮ್ಮ ತೊಂದರೆ ಹೇಳಿಕೊಂಡಿದ್ದರು. ಎರಡು ದಿನಗಳ ಹಿಂದೆ ಜಿಲ್ಲಾಧಿಕಾರಿ ಕರೆದಿದ್ದಾಗಲೂ ಮಾಲಿನ್ಯದ ದುಷ್ಪರಿಣಾಮ ಜನರ ಮೇಲೆ ಹೇಗೆ ಆಗಿದೆ ಎನ್ನುವುದು ಅವರಿಗೆ ಮನವರಿಕೆಯಾಗಿದ್ದು,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಹಿರೇಬಗನಾಳ ಗ್ರಾಮದಲ್ಲಿ ಇದೇ ವರ್ಷದ ಫೆಬ್ರುವರಿಯಲ್ಲಿ ಜನರ ಆರೋಗ್ಯ ತಪಾಸಣೆ ನಡೆಸಿದೆ. ಗ್ರಾಮದಲ್ಲಿ 208 ಮಕ್ಕಳು ಸೇರಿ 2,133 ಜನಸಂಖ್ಯೆಯಿದೆ. ಈ ಪೈಕಿ



ಹಿರೇಬಗನಾಳದಲ್ಲಿ ನಡೆದ ಸಭೆಯಲ್ಲಿ ಅನಾರೋಗ್ಯಪೀಡಿತ ಮಗುವಿನೊಂದಿಗೆ ತಾಯಿ ಕಣ್ಣೀರು ಹಾಕಿದ ಚಿತ್ರಣ

ಉಸಿರಾಟ ಸಂಬಂಧಿ ಕಾಯಿಲೆಯಿಂದ 124, ಚರ್ಮಕಾಯಿಲೆಯಿಂದ 49, ಹಿರಿಯ ಗರ್ಭಕೋಶ ಹಾಗೂ ಬಾಯಿ ಕ್ಯಾನ್ಸರ್, 25 ಜನರಲ್ಲಿ ಟಿಬಿ, 58 ಜನರಲ್ಲಿ ಬಿಪಿ, 40 ಜನರಲ್ಲಿ ಮಧುಮೇಹ, 42 ವ್ಯಕ್ತಿಗಳಲ್ಲಿ ದೃಷ್ಟಿದೋಷ ಹಾಗೂ ಮೂವರಿಗೆ ಪಾರ್ಶ್ವವಾಯು (ಸ್ಟ್ರೋಕ್) ಆಗಿದೆ

> ಹಿರೇಬಗನಾಳ ಗ್ರಾಮಸ್ಥರಲ್ಲಿ ಹಲವು ಕಾಯಿಲೆಗಳು ಕಂಡುಬಂದಿವೆ. ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಪ್ರತಿ ಮೂರು ದಿನಗಳಿಗೊಮ್ಮೆ ಅಲ್ಲಿನ ಜನರ ಆರೋಗ್ಯ ತಪಾಸಣೆ ನಡೆಸಲಾಗುವುದು
>
> ಡಾ. ಲಿಂಗರಾಜು ಟಿ., ಡಿಎಚ್‌ಒ, ಕೊಪ್ಪಳ

ಎನ್ನುವುದು ಗೊತ್ತಾಗಿದೆ.

ಗ್ರಾಮಸ್ಥರ ಅನಾರೋಗ್ಯ ಬಗ್ಗೆ ನಿರಂತರವಾಗಿ ದೂರುಗಳು ಬಂದಿದ್ದರಿಂದ ಆರೋಗ್ಯ ಇಲಾಖೆ ಗ್ರಾಮದಲ್ಲಿ ತಪಾಸಣೆ ಮಾಡಿದ್ದು, ನೆರೆಯ ಹಾಲವರ್ತಿ, ಅಲ್ಲಾನಗರ ಸೇರಿದಂತೆ ವಿವಿಧೆಡೆಯೂ ತಪಾಸಣೆಗೆ ಮುಂದಾಗಿದೆ.

ಕಾರ್ಖಾನೆಗಳ ಮಾಲಿನ್ಯ ನಿಯಂತ್ರಿಸಬೇಕು ಹಾಗೂ ಕಾರ್ಖಾನೆಗಳ ವಿಸ್ತರಣೆಗೆ ಅವಕಾಶ ಕೊಡಬಾರದು ಎಂದು ಆಗ್ರಹಿಸಿ ಜಿಲ್ಲಾ ಬಚಾವೊ ಆಂದೋಲನ ಹಾಗೂ ಪರಿಸರ ಹಿತರಕ್ಷಣಾ ವೇದಿಕೆಯ ಜಂಟಿ ಕ್ರಿಯಾ ವೇದಿಕೆ 128 ದಿನಗಳಿಂದ ಜಿಲ್ಲಾ ಕೇಂದ್ರದಲ್ಲಿ ಧರಣಿ ನಡೆಸುತ್ತಿದೆ.

'ಮಾಲಿನ್ಯಭರಿತ ಕಾರ್ಖಾನೆಗಳ ಸುತ್ತಲೂ ಇರುವ ಗ್ರಾಮಗಳ ಜನರ ಬದುಕು

> ಗ್ರಾಮದ ಬಹಳಷ್ಟು ಜನ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ತಪಾಸಣೆ ವೇಳೆಯೂ ಗ್ರಾಮದ ಜನರಲ್ಲಿ ಸಮಸ್ಯೆ ಇರುವುದು ಬಹಿರಂಗವಾಗಿದೆ. ಇದಕ್ಕೆ ಕಾರ್ಖಾನೆಗಳಿಂದಾಗುವ ಮಾಲಿನ್ಯವೇ ಕಾರಣ
>
> ಗವಿಸಿದ್ದಪ್ಪ ಟಿ., ಹಿರೇಬಗನಾಳ ಗ್ರಾಮಸ್ಥ

> ಹಿರೇಬಗನಾಳ ಗ್ರಾಮದ ಜನರಲ್ಲಿ ಆರೋಗ್ಯ ಸಮಸ್ಯೆಗಳು ಕಂಡುಬಂದಿವೆ. ಮಾಲಿನ್ಯ ಉಂಟು ಮಾಡುತ್ತಿರುವ ಕಾರ್ಖಾನೆಗಳಿಗೆ ನೋಟಿಸ್ ನೀಡಿ ಕ್ರಮ ಕೈಗೊಳ್ಳಲಾಗುವುದು.
>
> ಡಾ. ಸುರೇಶ ಇಟ್ನಾಳ, ಜಿಲ್ಲಾಧಿಕಾರಿ

ಅಸಹನೀಯವಾಗಿದೆ ಎಂದು ಧರಣಿ ಆರಂಭವಾಗಲೇ ಹೇಳಿದ್ದೆವು. ಆದ್ದರಿಂದ ಮಾಲಿನ್ಯಭರಿತ ಬಾಧಿತ ಗ್ರಾಮಗಳ ಜನರನ್ನು ಭಾರತೀಯ ವೈದ್ಯಕೀಯ ಸಂಸ್ಥೆಯಿಂದಲೇ ಸಂಪೂರ್ಣ ಆರೋಗ್ಯ ತಪಾಸಣೆ ನಡೆಸಬೇಕು. ಆಗ ಇನ್ನಷ್ಟು ಸಮಸ್ಯೆಗಳು ಗೊತ್ತಾಗುತ್ತವೆ' ಎಂದು ಕ್ರಿಯಾ ವೇದಿಕೆಯ ಪ್ರಧಾನ ಸಂಚಾಲಕ ಅಲ್ಲಮಪ್ರಭು ಬೆಟ್ಟದೂರು ಆಗ್ರಹಿಸಿದ್ದಾರೆ.



File No. HFW/75/SMM/2026-HEALTH 1-HEALTH AND FAMILY WELFARE SEC (Computer No. 2108169)
Generated from eOffice by SATISH BAGAPPA HANGARAGI, HFW-ASST2(SRH), HEALTH1 ASSISTANT, HEALTH AND FAMILY WELFARE SEC on 09/04/

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಕೊಪ್ಪಳ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

...ಣಿ ಸಂಖ್ಯೆ: 08539-221660/221602 Fax:222145
...dhokoppal@gmail.com

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳ ಕಾರ್ಯಾಲಯ, ಕೊಪ್ಪಳ ಜಿಲ್ಲೆ

ಸಂಖ್ಯೆ:ಜಿ.ಆ.ಕು.ಕ.ಕೊ/ 113 /2025-26 ದಿನಾಂಕ:11/03/2026

ಇವರಿಗೆ,
ಮಾನ್ಯ ಜಿಲ್ಲಾಧಿಕಾರಿಗಳು,
ಕೊಪ್ಪಳ ಜಿಲ್ಲೆ.

ಮಾನ್ಯರು,

ವಿಷಯ:- ಹಿರೇಬಗನಾಳ ಗ್ರಾಮದಲ್ಲಿ ನಡೆದ ಮನೆ ಮನೆ ಸಮೀಕ್ಷೆಯ ವರದಿ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ:- ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಗಿಣಗೇರಾ, ಕೊಪ್ಪಳ ತಾ||ಜಿಲ್ಲೆ ಇವರ ಪತ್ರ ಸಂಖ್ಯೆ:ಪ್ರಾ.ಆ.ಕೇ.ಗಿ/67/2025-26 ದಿನಾಂಕ:24.02.2026

*****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಗಿಣಗೇರಾ, ಕೊಪ್ಪಳ ತಾ||ಜಿಲ್ಲೆ ಇವರ ವ್ಯಾಪ್ತಿಯಲ್ಲಿ ಬರುವ ಹಿರೇಬಗನಾಳ ಗ್ರಾಮದಲ್ಲಿ ದಿನಾಂಕ:11.02.2026 ಮತ್ತು 12.02.2026 ರಂದು ಎರಡು ದಿನಗಳ ಕಾಲ ಮನೆ ಮನೆಯ ಆರೋಗ್ಯ ಸಮೀಕ್ಷೆಯಲ್ಲಿ P&SM PG Student ನಾಲ್ಕು MBBS INTERNS, SHIO, PHCO, CHO, ಆಶಾ ಕಾರ್ಯಕರ್ತೆಯರು ಹಾಗೂ ತಾಲ್ಲೂಕು ಕಛೇರಿ ಕೊಪ್ಪಳದ ಆಶಾ ಸುಗಮಗಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಗಿಣಗೇರಾ, ಕೊಪ್ಪಳ ತಾ||ಜಿಲ್ಲೆ ಇವರ ನೇತೃತ್ವದಲ್ಲಿ ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳು, ಕೊಪ್ಪಳ ಇವರ ಮಾರ್ಗದರ್ಶನದಲ್ಲಿ ಮನೆ ಮನೆ ಸಮೀಕ್ಷೆಯನ್ನು ನಡೆಸಿ ಉಲ್ಲೇಖಿತ ಪತ್ರದಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ.

ಅದ್ದರಿಂದ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹಿರೇಬಗನಾಳ ಗ್ರಾಮದಲ್ಲಿ ಮನೆ ಮನೆ ಸಮೀಕ್ಷೆಯನ್ನು ನಡೆಸಿ ಉಲ್ಲೇಖಿತ ಪತ್ರದಲ್ಲಿ ವರದಿಯನ್ನು ಸಲ್ಲಿಸಿರುವುದನ್ನು ಮಾನ್ಯರ ಅವಗಾಹನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು, ಕೊಪ್ಪಳ

ಲಗತ್ತು:- ಉಲ್ಲೇಖಿತ ಪತ್ರ & ವರದಿ

ಪ್ರತಿಯನ್ನು:-

1. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ ಜಿಲ್ಲೆ, ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಿಭಾಗೀಯ ಸಹ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಕಲಬುರಗಿ ವಿಭಾಗ, ಇವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು, ಕೊಪ್ಪಳ

Scanned with OKEN Sc



File No. HFW/75/SMM/2026-HEALTH 1-HEALTH AND FAMILY WELFARE SEC (Computer No. 2108169)
Generated from eOffice by SATISH BAGAPPA HANGARAGI, HFW-ASST2(SRH), HEALTH1 ASSISTANT, HEALTH AND FAMILY WELFARE SEC on 09/04/2